# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಹಾಗೂ ವಿಶೇಷ ನ್ಯಾಯಾಲಯ, ಹಾವೇರಿ
## ಸ್ಪೆಷಲ್ ಎಸ್.ಸಿ./ಎಸ್.ಟಿ.42/2025

Pw-01

Cw-02

ಸಾಕ್ಷಿದಾರರ ಹೆಸರುಃ ಶ್ರೀ ಅರವಿಂದ ದೇಸಾಯಿ

ತಂದೆ:ಗಂಡನ ಹೆಸರುಃ ಶ್ರೀ ನಿಂಗಪ್ಪ

ವಯಸ್ಸುಃ 39 ವರ್ಷ

ಉದ್ಯೋಗಃ ಪಿಡಿಓ, ಅರಳಗುಂಡಗಿ ಗ್ರಾಮ ಪಂಚಾಯತಿ

ವಾಸ ಸ್ಥಳಃ ಅರಳಗುಂಡಗಿ ತಾಃ ಯಡ್ರಾಮಿ, ಜಿಃ ಕಲಬುರ್ಗಿ

**ದಿನಾಂಕ:06.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ನಾನು ದಿನಾಂಕಃ23.05.2025 ರಿಂದ 28.09.2025 ರವರೆಗೆ ಕೆಲವರಕೊಪ್ಪ ಗ್ರಾಮ ಪಂಚಾಯತಿಯಲ್ಲಿ ಪಿಡಿಓ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕಃ13.06.2025 ರಂದು ಬೆಳಿಗ್ಗೆ 10.00 ಗಂಟೆಗೆ ನಾನು ಕೆಲವರಕೊಪ್ಪ ಗ್ರಾಮ ಪಂಚಾಯತಿಯಲ್ಲಿ ಪಿಡಿಓ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ಆಡೂರು ಪಿಎಸ್ಐ ರವರು ನನಗೆ ಫೋನ್ ಮಾಡಿ ಜಗಳ ಆದ ಸ್ಥಳಕ್ಕೆ ಪಂಚನಾಮೆಗೆ ಸಾಕ್ಷಿಯಾಗಲು ಬನ್ನಿ ಎಂದು ಹೇಳಿದರು. ಆಗ ನಾನು ಸದರಿ ವಿಚಾರವನ್ನು ನಮ್ಮ ಮೇಲಾಧಿಕಾರಿಗಳಾದ ತಾಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮೌಖಿಕವಾಗಿ ತಿಳಿಸಿದೆನು. ಆಗ ಅವರು ಪಂಚನಾಮೆಗೆ ಸಹಕರಿಸಿ ಎಂದು ನನಗೆ ಫೋನ್ ಮೂಲಕ ತಿಳಿಸಿದರು. ಆಗ ಅನುಮತಿಯನ್ನು ಪಡೆದು ನಾನು ಮತ್ತು ನನ್ನ ಸಿಬ್ಬಂದಿಯಾದ ಚಾಸಾ-3 ರವರು ಸೇರಿಕೊಂಡು ಘಟನಾ ಸ್ಥಳವಾದ ಕೆಲವರಕೊಪ್ಪ ಗ್ರಾಮದ ಹಿರೇ ಬಾಸೂರು ರಸ್ತೆಗೆ ಹೋದೆವು.

2. ನಾವು ಘಟನಾ ಸ್ಥಳಕ್ಕೆ ಹೋಗುವಷ್ಟರಲ್ಲಿ ಅಲ್ಲಿಗೆ ಡಿವೈಎಸ್ಪಿ, ಪಿಎಸ್ಐ ಮತ್ತು ಅವರ ಸಿಬ್ಬಂದಿಗಳು ಸ್ಥಳಕ್ಕೆ ಬಂದಿದ್ದರು. ಆಗ ಪೊಲೀಸರು ಸ್ಥಳ ಪರಿಶೀಲನೆ ಮಾಡಿ,

ಪಂಚನಾಮೆ ಮಾಡಿ, ನಕಾಶೆ ತೆಗೆದು, ಪೋಟೋಗಳನ್ನು ತೆಗೆದುಕೊಂಡು ನಮ್ಮ ಸಹಿಗಳನ್ನು ತೆಗೆದುಕೊಂಡರು. ನಮಗೆ ಮತ್ತು ಪೊಲೀಸರಿಗೆ ಘಟನಾ ಸ್ಥಳವನ್ನು ಒಬ್ಬ ಹೆಣ್ಣು ಮಗಳು ತೋರಿಸಿದರು. ಘಟನಾ ಸ್ಥಳದಲ್ಲಿ ಒಂದು ಟ್ರ್ಯಾಕ್ಟರ್ ಇದ್ದು, ಅದರ ಚಕ್ರದ ಗಾಳಿಯನ್ನು ತೆಗೆಯಲಾಗಿತ್ತು.

3. ಸ್ಥಳ ಪಂಚನಾಮೆಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-1 ಎಂದು, ನನ್ನ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಕಾಶೆಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-2 ಎಂದು, ನನ್ನ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಪೋಲೀಸರು ತೆಗೆದ 2 ಪೋಟೋಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ಈಗಾಗಲೇ ನಿಪಿ-3 ಮತ್ತು 4 ಎಂದು ಗುರುತಿಸಲಾಯಿತು. ಸದರಿ ಪೋಟೋಗಳಲ್ಲಿ ನನ್ನ ಭಾವಚಿತ್ರ ಇರುತ್ತದೆ.

**ಪಾಟೀ ಸವಾಲುಃ 1 ರಿಂದ 8 ನೇ ಆರೋಪಿತರ ಪರವಾಗಿ ಶ್ರೀ ಎಸ್.ಎಫ್.ವಿ ವಕೀಲರಿಂದಃ**

4. ಪಂಚನಾಮೆಯಲ್ಲಿ ಏನೇನು ಬರೆಯಲಾಗಿದೆ ಎಂದು ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ನಿಜ. ನನಗೆ ಪಿಎಸ್ಐ ರವರು ಫೋನ್ ಮಾಡಿ ಕೆಲವರಕೊಪ್ಪದಲ್ಲಿ ಒಂದು ಗಲಾಟೆಯಾಗಿದೆ, ಅದಕ್ಕೆ ಪಂಚನಾಮೆ ಮಾಡಲು ಹೋಗಬೇಕಾಗಿದೆ ಆದ ಕಾರಣ ನೀವು ಪಂಚನಾಮೆಗೆ ಸಹಕರಿಸಿ ಎಂದು ನನಗೆ ತಿಳಿಸಿದರು. ಪಿಎಸ್ಐ ರವರ ಮೊಬೈಲ್ ನ ನಂಬರ್ ನನಗೆ ಗೊತ್ತಿಲ್ಲ. ಪಿಎಸ್ಐ ರವರು ನನಗೆ ಆ ರೀತಿ ಫೋನ್ ಮಾಡಿಲ್ಲದ ಕಾರಣ ಅವರ ಮೊಬೈಲ್ ನಂಬರ್ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಸ್ಥಳ ಪಂಚನಾಮೆಯನ್ನು ಮಧ್ಯಾಹ್ನ 12.30-1.00 ಗಂಟೆ ಸಮಯದಲ್ಲಿ ಜರುಗಿಸಿರುತ್ತಾರೆ.

5. ಪೊಲೀಸರು ಸ್ಥಳ ಪಂಚನಾಮೆ ಮಾಡುವ ಕಾಲಕ್ಕೆ ನಾನು, ಚಾಸಾ-3, ಪಿರ್ಯಾದಿ ಮತ್ತು ಪೊಲೀಸರು ಹಾಗೂ ಅವರ ಸಿಬ್ಬಂದಿಗಳು ಇದ್ದರು. ಪೊಲೀಸರ ಪೈಕಿ ಎಷ್ಟು ಜನರು ಇದ್ದರು ಎಂದು ನನಗೆ ಈಗ ನೆನಪಿಲ್ಲ. ನನಗೆ ಘಟನಾ ಸ್ಥಳದ ವೈಯಕ್ತಿಕ ಮಾಹಿತಿ ಇರುವುದಿಲ್ಲ. ಸ್ಥಳದಲ್ಲಿದ್ದ ಟ್ರ್ಯಾಕ್ಟರ ಪೂರ್ವ-ಪಶ್ಚಿಮವಾಗಿ ನಿಂತಿತ್ತು. ಪೊಲೀಸರು ಸ್ಥಳ ಪಂಚನಾಮೆ ಮಾಡುವಾಗ ಯಾವುದೇ ಪೋಟೋ ತೆಗೆದಿಲ್ಲ ಎಂದರೆ ಸರಿಯಲ್ಲ.

ಪೊಲೀಸರು ಘಟನಾ ಸ್ಥಳವನ್ನು ತೋರಿಸಿ ಪೋಟೋ ತೆಗೆದಿರುತ್ತಾರೆ. ಟ್ರ್ಯಾಕ್ಟರ್ ನ ಕಂಪನಿ ಮತ್ತು ನೋಂದಣಿ ಸಂಖ್ಯೆಯನ್ನು ನನಗೆ ಹೇಳಲಾಗುವುದಿಲ್ಲ.

6. ಪೊಲೀಸರು ನನ್ನ ಸಮಕ್ಷಮ ನಕ್ಷೆಯನ್ನು ತಯಾರಿಸಿರುತ್ತಾರೆ. ಪೊಲೀಸರ ಕೋರಿಕೆಯ ಮೇರೆಗೆ ಪಂಚನಾಮೆಗೆ ಮತ್ತು ನಕ್ಷೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸ್ಥಳ ಪಂಚನಾಮೆ ಮತ್ತು ನಕ್ಷೆಗೆ ಘಟನಾ ಸ್ಥಳದಲ್ಲಿಯೇ ಸಹಿ ಮಾಡಿರುತ್ತೇನೆ. ಟ್ರ್ಯಾಕ್ಟರ್ ಹಿಂದೆ ಟ್ರೇಲರ್ ಇದ್ದ ಬಗ್ಗೆ ನನಗೆ ಈಗ ನೆನಪಿಲ್ಲ. ಪೊಲೀಸರು ನನಗೆ ಘಟನಾ ಸ್ಥಳದಲ್ಲಿ ಸದರಿ ಸ್ಥಳವನ್ನು ಮತ್ತು ಟ್ರ್ಯಾಕ್ಟರ್ ನ್ನು ಬಿಟ್ಟು ಬೇರೆನನ್ನೂ ತೋರಿಸಿಲ್ಲ ಎಂದರೆ ನಿಜ. ಟ್ರ್ಯಾಕ್ಟರ್ ಮಾಲೀಕರು ಯಾರೆಂದು ನನಗೆ ಗೊತ್ತಿಲ್ಲ.

7. ನಾನು ಸ್ಥಳ ಪಂಚನಾಮೆಗೆ ಮತ್ತು ನಕಾಶೆಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪೊಲೀಸರಿಗೆ ಸಹಾಯಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು ಹಾವೇರಿ.